# ವ್ಯಕ್ತ -ಮಧ್ಯ

ನಿಸರ್ಗದ ನಡೆ ಸರಳವಾಗಿಲ್ಲ. ಅದರಲ್ಲೊಂದು ನಿಗೂಢತೆ ಇದೆ. ಅಥವಾ ಅದು ಸರಳವಾಗಿಯೇ ಇದ್ದು ನಮಗೆ ಮಾತ್ರ ಹೀಗೆ ಅನ್ನಿಸುವುದೋ ಏನೋ. ಈ ಅನಿಸಿಕೆಯನ್ನು ಒಪ್ಪಿದರೆ ನಾವು– ಮನುಷ್ಯ ಸಂಕುಲ– ನಿಸರ್ಗದ ಭಾಗವಾಗಿಯೇ ಇದ್ದು ಕೂಡ, ಅದೇನೋ ಒಂದು ಕಾರಣದಿಂದ ನಿಸರ್ಗವನ್ನು ಅದು ಹೇಗಿದೆಯೋ ಹಾಗೆ ತಿಳಿಯಲು ಆಗುತ್ತಿಲ್ಲ ಎಂದಾಯಿತು. ಮತ್ತು ಆ ಕಾರಣವು ನಮ್ಮಲ್ಲೇ ಇದೆ; ಅಂದರೆ ನಮ್ಮಲ್ಲೇ ಒಂದು ನಿಗೂಢತೆಯ ಅಂಶವಿದೆ; ನಮ್ಮೊಳಗಿನ ನಿಗೂಢತೆಯನ್ನು ನಾವೇ ಭೇದಿಸಬೇಕಾಗಿದೆ; ಭೇದಿಸಿತಿಳಿಯಬೇಕಾಗಿದೆ, ಈ ತಿಳಿವಳಿಕೆಯನ್ನು ಪಡೆಯುವುದೇ ಜೀವನದ ದೊಡ್ಡಗುರಿ– ಎಂದಾಯಿತು. ತಿಳಿವಳಿಕೆಯೇ ಜೀವನ. ಈ ತಿಳಿವಳಿಕೆಯು ಜೀವನದಲ್ಲಿಯೇ ಇದ್ದರೂ ಅದು ಅಡಗಿದಂತೆ ಇರುವುದರಿಂದ ಅದನ್ನು ಅರಸಿ; ಅನ್ವೇಷಿಸಿಯೇ ಪಡೆಯಬೇಕಾಗಿರುವುದರಿಂದ, ಈಗಿನ ನಮ್ಮ ತಿಳಿವಳಿಕೆಯನ್ನು ನಿರಾಕರಣ ಮಾಡಬೇಕಿಲ್ಲವಾದರೂ ಪೂರ್ತಿಯಾಗಿ ಅದನ್ನು ಒಪ್ಪಲೂ ಸಾಧ್ಯವಿಲ್ಲ ಎಂದಾಯಿತು. ಅಂದಾಗ ಈಗಿನ ನಮ್ಮ ತಿಳಿವಳಿಕೆಯ ಕಾರಣಕ್ಕೆ ಒಂದು ದ್ವಂದ್ವ– ತಲ್ಲಣವನ್ನು ಅನುಭವಿಸುವಂತಾಯಿತು. ತಲ್ಲಣವನ್ನು ಅನುಭವಿಸದೆ ತಲ್ಲಣದಿಂದ ಪಾರಾಗಲೂ ಸಾಧ್ಯವಿಲ್ಲ ಎಂದೂ ಏರ್ಪಟ್ಟಿತು. ಈಗಿನ ತಿಳಿವಳಿಕೆಯ ಬಗೆಗೇ ನಿಜವಾಗಿ ತಲ್ಲಣಗೊಳ್ಳುವುದಕ್ಕೂ ಮತ್ತು ಹೊಸ ಅರಿವನ್ನು ಪಡೆದು ಹೊಸ ಮನುಷ್ಯನಾಗುವುದಕ್ಕೂ ಒಳಗಿಂದೊಳಗೇ ಒಂದು ಸಂಬಂಧವಿದೆ–ಎಂದಾಯಿತು. ಪಡೆಯಲಿರುವ ಹೊಸ ಅರಿವಿನ , ಹೊಸ ವ್ಯಕ್ತಿತ್ವದ ಇನ್ನೊಂದು ರೂಪವೇ ಅಗಿ ಈಗಿನ ತಲ್ಲಣ ಕಾಣಿಸಿಕೊಳ್ಳುತ್ತಿದೆ ಎಂದಾಯಿತು.

ನಾವು ಬದುಕುತ್ತಿರುವ ಈಗಿನ ಬದುಕನ್ನು 'ವ್ಯಕ್ತ -ಮಧ್ಯ' ಎನ್ನುವ ನುಡಿಗಟ್ಟಿನಲ್ಲಿ ಭಗವದ್ಗೀತೆ ಸೂಚಿಸುತ್ತದೆ. ಜೀವಿಗಳು ಹುಟ್ಟುವ ಮುನ್ನ ಸ್ಥಿತಿ 'ಅವ್ಯಕ್ತ'. ಜೀವಿಗಳು ಸತ್ತ ಮೇಲೆ ಅನಂತರದ ಸ್ಥಿತಿ ಕೂಡಾ 'ಅವ್ಯಕ್ತ'. ಹುಟ್ಟು–ಸಾವುಗಳ ನಡುವಣ ಈ ಸ್ಥಿತಿಯನ್ನು 'ವ್ಯಕ್ತ– ಮಧ್ಯ' –ಅಂದರೆ– ಕಾಣಿಸದ ಎರಡು ಅವ್ಯಕ್ತಗಳ ನಡುವಿನ ವ್ಯಕ್ತಗೊಂಡು ಕಾಣಿಸುತ್ತಿರುವ ಸ್ಥಿತಿ ಎಂದು ತಾಂತ್ರಿಕ ಸಮರ್ಪಕತೆಯಿಂದ ಗೀತೆ ವರ್ಣಿಸುತ್ತದೆ. 'ವ್ಯಕ್ತ–ಮಧ್ಯ'ವನ್ನೇ 'ಭಾವ ಮಧ್ಯ' ಎಂಬ ಮತ್ತೊಂದು ಪರ್ಯಾಯಪದದಿಂದ ಮಹಾಭಾರತದಲ್ಲಿ ಹೇಳಿದ್ದುಂಟು.

'ವ್ಯಕ್ತ–ಮಧ್ಯ' ಎಂಬ ವಿಶಿಷ್ಟವಾದ ಪದ ಅವ್ಯಕ್ತವನ್ನೂ ಸೂಚಿಸುತ್ತದೆ 'ಮಧ್ಯ' ಎಂಬ ಪದ ಆದ್ಯಂತಗಳನ್ನೂ ಸೂಚಿಸುತ್ತದೆ. ಪ್ರಕಟಗೊಂಡಿರುವ ಈ ಮಧ್ಯವು, ಅಪ್ರಕಟವಾಗಿರುವ ಆದ್ಯಂತಗಳನ್ನು ಒಳಗೊಂಡಿವೆ ಎಂಬುದನ್ನು ಸೂಚಿಸುವುದಕ್ಕಾಗಿಯೇ 'ವ್ಯಕ್ತ–ಮಧ್ಯ' ಎಂಬ ಪದ ಬಂದಿರುವುದು. ಹುಟ್ಟು–ಸಾವುಗಳ ನಡುವಣ ಈ ಬದುಕು ಹುಟ್ಟು ಸಾವುಗಳಾಚೆಗಿನ ಸತ್ಯವನ್ನು ತನ್ನಲ್ಲಿ ಅಡಗಿಸಿಕೊಂಡಿದೆ. ವ್ಯಕ್ತ ದಲ್ಲಿ ಅವ್ಯಕ್ತವಿದೆ. ಬದುಕಿನಲ್ಲಿ ಸಾವೂ ಇದೆ. ಹಾಗಿರುವುದರಿಂದಲೇ ಈ ಬದುಕಿನಲ್ಲಿ ಇಷ್ಟು ತಲ್ಲಣವಿರುವುದು. ವ್ಯಕ್ತವು ಅವ್ಯಕ್ತವನ್ನು ತನ್ನ ವಿರೋಧಿ ಎಂದು ಭಾವಿಸಿಕೊಂಡಿದೆ.

ಬದುಕು, ಸಾವನ್ನು ತನ್ನ ವಿರೋಧಿ ಎಂದು ನಿರ್ಧರಿಸಿಬಿಟ್ಟಿದೆ. ಸಾವು ಅನಿವಾರ್ಯ ಎಂದೂ ಬದುಕಿಗೆ ತಿಳಿದಿರುವುದರಿಂದ, ಅಂದರೆ ತನ್ನ ವಿರೋಧಿ ತನ್ನಲ್ಲೇ ಅಡಗಿರುವನೆಂದು ತಿಳಿದಿರುವುದರಿಂದ–ಈ ವ್ಯಕ್ತ ಮಧ್ಯದ ಬದುಕಿನ ತಲ್ಲಣ ಹೇಳತೀರದು. ಇದೊಂದು ನಿರಂತರ ಕುಭಿತ ಸಮುದ್ರ.!

ಹುಟ್ಟು– ಸಾವುಗಳ ಜಿಜ್ಞಾಸೆಯು –ಅದೊಂದು ಅಮೂರ್ತ ಜಿಜ್ಞಾಸೆಯಾಗಿದ್ದರೂ– ನಿಸರ್ಗದಲ್ಲಿ ಈ ವಿದ್ಯಮಾನವು ಅಪೂರ್ವವಾಗಿ ಮೂರ್ತವಾಗಿಯೇ ನಡೆಯುವುದುಂಟು. ಪಶ್ಚಿಮ ದೇಶಗಳಲ್ಲಿ, ಹೆಪ್ಪುಗಟ್ಟುವ ಚಳಿಯ, ಶಿಶಿರದ ನಡುವೆ ಇದ್ದಕ್ಕಿದ್ದಂತೆ ವಸಂತಕಾಲದ ಲಕ್ಷಣಗಳು– ಕೆಲವುದಿನಗಳು ಮಾತ್ರ– ತೋರುವುದುಂಟಂತೆ. ಆಗ ಮಧುಮಾಸದ ಸನ್ನಿವೇಶವೇ ಗೋಚರಿಸುವುದಂತೆ. ಇದೊಂದು ಆಕಸ್ಮಿಕ. ಇದೊಂದು ವಿಶೇಷ. ಇದೊಂದು ಅನಿರೀಕ್ಷಿತ ಅವತರಣ. ಈ ವಿದ್ಯಮಾನವನ್ನು ಕವಿ ಟಿ.ಎಸ್. ಎಲಿಯೆಟ್ ನ ಪದ್ಯವೊಂದು – **Midwinter spring is its own season** – ಎಂದು ಬಣ್ಣಿಸುತ್ತದೆ! **It is its own season** ಎಂಬ ಮಾತು ಮಹತ್ವದ್ದು. ಶಿಶಿರದ ಚಳಿಯ ನಡುವೆ ನುಸುಳಿ ಬಂದ ವಸಂತ ತನ್ನ ಪರಿಚಯ ಹೇಳಿಕೊಳ್ಳಬೇಕಿಲ್ಲ. ಕ್ರಮ ತಪ್ಪಿ ರಂಗಕ್ಕೆ ಬಂದವನ ಹೆಜ್ಜೆಗಾರಿಕೆಗೆ ಹೋಲಿಕೆಯೇ ಇಲ್ಲ! ಅದು ಅನುಪಮ. ಹಿಮ್ಮೇಳದ ಛಂದಸ್ಸೆಲ್ಲಾ ತಬ್ಬಿಬ್ಬು! ಕ್ಷಣ ಮಾತ್ರದಲ್ಲಿ ಸಾವರಿಸಿಕೊಂಡು ಇಡಿಯ ರಂಗವೇ ಹೊಸಬನ ಹಿಂದೆ ಬೀಳುವುದೊಂದೇ ಅದರ ವಿಧಿ. ಅದರ ಸೋಜಿಗ. **It is its own season** – ಎನ್ನುತ್ತಾನೆ ಕವಿ. ಸ್ವಯಮಾಚಾರ್ಯಪುರುಷ ಎಂದಂತೆ. ನಿರಂತರ ತಿರುಗುತ್ತಿರುವ ಋತುಚಕ್ರಕ್ಕೆ ಕೆಲವು ಕ್ಷಣಗಳ ವಿಶ್ರಾಂತಿಯನ್ನಾದರೂ ಒದಗಿಸುವುದೇನು ಸಾಮಾನ್ಯ ಸಂಗತಿಯೇ? ಹೌದು. ಶಿಶಿರದ ನಡುವೆ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ವಸಂತ ತನ್ನ ವ್ಯುತ್ಕ್ರಮದ ಮೂಲಕವೇ ಒಂದು ಸಂಭ್ರಮಾತಿಶಯವೂ ಹೌದು. ಒಂದು ಬೆರಗಿನ ವಿಶ್ರಾಂತಿಯೂ ಹೌದು. ಅವ್ಯಕ್ತವನ್ನು ಹೀಗೆ ಅನಿರೀಕ್ಷಿತವಾಗಿ ಬರಮಾಡಿಕೊಳ್ಳಲು ವ್ಯಕ್ತವು ಸಜ್ಜಾಗಿದೆ ಎಂದು ಸೂಚಿಸಲೋ ಎಂಬಂತೆ – 'ವ್ಯಕ್ತ ಮಧ್ಯ' ಎಂಬ ನುಡಿಗಟ್ಟು ಹೊಳೆಯುತ್ತಿದೆ.

ಗೋಪಾಲಕೃಷ್ಣ ಅಡಿಗರ ಪ್ರಸಿದ್ಧ ಪದ್ಯ ' ಮೋಹನ ಮುರಲಿ' ನೆನಪಾಗುತ್ತಿದೆ.

ಅದರ ಒಂದು ಸಾಲು 'ಏನಿದೇನಿದು ಹೊರಳುಗಣ್ಣಿನ ತೇಲು ನೋಟದ ಸೂಚನೆ ಯಾವ ಸುಮಧುರ ಯಾತನೆ? ಯಾವ ದಿವ್ಯದ ಯಾಚನೆ?'

ಇಂದ್ರಿಯ ಭೋಗಗಳಲ್ಲಿ ಮಗ್ನವಾಗಿದ್ದ ಜೀವಕ್ಕೆ ಇದ್ದಕ್ಕಿದ್ದಂತೆ ಕೊಳಲಿನ ಕರೆಯೊಂದು ಕೇಳಿಸಿದಂತಾಗುತ್ತದೆ. ಆಗ ಅದುವರೆಗೆ ತನಗೇ ಗೊತ್ತಿಲ್ಲದೆ ತನ್ನೊಳಗೇ ಅಡಗಿದ್ದ ಸ್ಪಂದನಗಳು ಎಚ್ಚರಗೊಳ್ಳುತ್ತವೆ. ಕೊಳಲಿನ ಕರೆಗೆ ಓಗೊಡದಿರುವುದು ಅಸಾಧ್ಯವೆಂಬಂತಾಗುತ್ತದೆ. ಕಣ್ಣು ಹೊರಳುಗಣ್ಣಾಗಿ, ನೋಟ ತೇಲುನೋಟವಾಗಿ, ಮೈ ವಿವಶವಾಗಿ, ಸೂಕ್ಷ್ಮವಾದ ಯಾತನೆಯ ಅನುಭವವಾಗುತ್ತದೆ. ಆದರೆ ಆ ಯಾತನೆಯನ್ನು ಬೇಡವೆನ್ನಲು ಮನಸ್ಸಾಗದು! ಅದು ದಿವ್ಯವನ್ನು ಕುರಿv ಜೀವದ ಒಳಗಿನ ಯಾಚನೆಯಂತೆ ಇರುತ್ತದೆ!

'ಯಾವ ಮೋಹನ ಮುರಲಿ ಕರೆಯಿತು ಇದ್ದಕಿದ್ದೊಲೆ ನಿನ್ನನು?' ಎಂದು ಕವಿ ತನ್ನನ್ನೇ ತಾನು ಕೇಳಿಕೊಳ್ಳುತ್ತಿದ್ದಾರೆ. ಅವ್ಯಕ್ತದ ಕರೆ– ಇಲ್ಲಿನ ಪ್ರಿಯವಾದ ಬಂಧನದಿಂದ ನಮ್ಮನ್ನು ಬಿಡಿಸುವ ಕರೆಯೂ ಆಗಿ ಉತ್ಕಟ ಮಧುರವಾಗಿದೆ! ಆ ಕರೆಯನ್ನು ಕೇಳಿಸಿಕೊಳ್ಳದಿರುವುದು ಒಂದು ದೌರ್ಭಾಗ್ಯವೆಂಬಂತಿದೆ. ಆದರೆ 'ವ್ಯಕ್ತ ಮಧ್ಯ' ಎಂಬ ನುಡಿಗಟ್ಟು, ಅವ್ಯಕ್ತದ ಕರೆಯೊಂದು ಇಲ್ಲೇ ಗುನುಗುನಿಸುತ್ತ ಸಣ್ಣಗೆ ಕಂಪಿಸುತ್ತಿದೆ ಎಂದು ಸೂಚಿಸುವುದಕ್ಕೆ ಶಕ್ತವಾಗಿದೆ.

■ **ತೋಷ**

## ಮಾತೇ ಮುತ್ತು

★ ದುಃಖ ನಿಮ್ಮನ್ನು ಆಳವಾಗಿ ಕೊರೆದಷ್ಟೂ ನಿಮ್ಮ ಸಂತೋಷದ ಪ್ರಮಾಣ ಹೆಚ್ಚಾಗುತ್ತದೆ.

-ಖಲೀಲ್ ಗಿಬ್ರಾನ್

★ ಶಿಕ್ಷಣವಿಲ್ಲದ ಬುದ್ಧಿವಂತ, ಗಣಿಯೊಳಗಿರುವ ಬೆಳ್ಳಿಯಂತೆ.

-ಬೆಂಜಮಿನ್ ಫ್ರಾಂಕ್ಲಿನ್

★ ಅನುಭವವೇ ಅತಿದೊಡ್ಡ ಶಿಕ್ಷಕ. ಅವನು ಮೊದಲು ಪರೀಕ್ಷೆ ಕೊಡುತ್ತಾನೆ, ಬಳಿಕ ಪಾಠ ಮಾಡುತ್ತಾನೆ.

—ವರ್ನನ್ ಲಾ

★ ಯಾವ ಮನುಷ್ಯನ ಜ್ಞಾನವೂ ಅವನ ಅನುಭವಕ್ಕಿಂತ ಮುಂದೆ ಹೋಗಲಾರದು.

—ಜಾನ್ ಲಾಕ್

★ ತಪ್ಪುಗಳಿಂದ ಪಾಠ ಕಲಿಯುವುದಿದ್ದರೆ ಮಾತ್ರ ಹಿಂದೆ ತಿರುಗಿ ನೋಡಿ.

—ಜಾರ್ಜ್ ವಾಷಿಂಗ್ಟನ್

★ ಒಂದು ಕ್ಷಣದ ಒಳನೋಟ, ಕೆಲವೊಮ್ಮೆ ಇಡೀ ಜೀವನದ ಒಟ್ಟು ಅನುಭವವವಾಗುತ್ತದೆ.

—ಒಲಿವರ್ ಹೋಮ್ಸ್

★ ನಮ್ಮ ಹೃದಯದಲ್ಲಿ ಮತ್ತು ಇನ್ನೊಬ್ಬ ಮನುಷ್ಯನಲ್ಲಿ ದೇವರು ಕಾಣಿಸಲಿಲ್ಲ ಎಂದಾದರೆ ಬೇರೆಲ್ಲಿ ದೇವರನ್ನು ಹುಡುಕುತ್ತೀರಿ?

—ಸ್ವಾಮಿ ವಿವೇಕಾನಂದ

★ ಸರಳತೆಯನ್ನು ಸಾಧಿಸುವುದು ಜಗತ್ತಿನಲ್ಲಿ ಅತ್ಯಂತ ಕಷ್ಟದ ಕೆಲಸ. ಅದು ಅನುಭವದ ಕೊನೆಯ ಮಿತಿ; ಬುದ್ಧಿವಂತನ ಕೊನೆಯ ಪ್ರಯತ್ನ.

—ಜಾರ್ಜ್ ಸ್ಯಾಂಡ್